ಕಾರಂತರ ಸುಳಿಯಲ್ಲಿ

ಪತಿಗೆ ತಕ್ಕ ಪತ್ನಿ ಅನ್ನಿಸಿಕೊಂಡಿದ್ದ ಲೀಲಾ ಕಾರಂತ

2

ವಿಶ್ವವಾಣಿ

ಆರಾಮ

@vishwavaninews

ಬೆಂಗಳೂರು
ಗುರುವಾರ
07 | 03 | 2024

ಅನುದಿನವೂ ವಿರಾಮಕ್ಕೆ ಒಂದು ನೆಪ

ತಂಜಾವೂರಿನ ಬೃಹದೀಶ್ವರ

ಪುಟ 3

ಬಿ ಪಾಸಿಟಿವ್

ಇದ್ದಂತೆ ನೋಡುವುದು

ವಾಸ್ತವದ ಲೋಕವನ್ನು ಅದು ಇರುವಂತೆ ನೋಡುವುದೇ ದೊಡ್ಡ ಸವಾಲು. ಇದು ಚಮತ್ಕಾರದ ಮಾತಿನಂತೆ ನಿಮಗೆ ಕಾಣಬಹುದು. ಆದರೆ ಇದು ನಿಜ. ವಸ್ತು, ವಿಷಯ, ಘಟನೆಗಳನ್ನು ಅವು ಇರುವಂತೆ ನಾವು ನೋಡುವುದೇ ಇಲ್ಲ. ಏನನ್ನು ನೋಡಿದರೂ ನಾವು ಇದುವರೆಗೆ ಮನಸ್ಸಿನಲ್ಲಿ ಏನನ್ನು ತುಂಬಿಕೊಂಡಿದ್ದೇವೋ ಅದರ ಹಿನ್ನೆಲೆಯಲ್ಲೇ ನೋಡುತ್ತೇವೆ. ಸಮುದ್ರವನ್ನು ನೋಡಿದವನೊಬ್ಬ 'ಇದೇನು, ಕನ್ನಂಬಾಡಿ ಕಟ್ಟೆ ಥರ ಇದೆ' ಅಂದನಂತೆ. ಅದು ಆತನ ದೃಷ್ಟಿಕೋನ, ತಿಳಿವಳಿಕೆಯ ಮಿತಿ. ಆತನ ಮನಸ್ಸಿನಲ್ಲಿ ಭದ್ರವಾಗಿ ಕೂತುಬಿಟ್ಟಿರುವ ಕನ್ನಂಬಾಡಿ ಕಟ್ಟೆಯು ಕಡಲನ್ನು ಕಣ್ತೆರೆದು ನೋಡಲು ಆತನನ್ನು ಬಿಟ್ಟೇ ಇಲ್ಲ. ಅದೇ ರೀತಿ, ಮೌಢ್ಯದ ವಾತಾವರಣದಲ್ಲಿ ಬೆಳೆದುಬಂದ ಅನೇಕರು ಎಷ್ಟೇ ವಿದ್ಯಾವಂತರಾದರೂ ತಮ್ಮ ಹಳೆಯ ಕಂದಾಚಾರಗಳನ್ನು ಬಿಡದಿರುವುದನ್ನು ನಾವು ನೋಡುತ್ತೇವೆ. ಅಮೆರಿಕಕ್ಕೆ ಹೋದರೂ ಅವರು ಇರುವುದು ಹಾಗೆಯೇ. ಅದಿರಲಿ, ನಮ್ಮ ಬದುಕಿನ ಸಣ್ಣಪುಟ್ಟ ಸಂಗತಿಗಳನ್ನೇ ನೋಡಿ. ಇನ್ನೂ ಈಗಷ್ಟೇ ಕಣ್ಣು ಬಿಡುತ್ತಿರುವ ಮಗುವೊಂದು ಲೋಕದ ಸಂಗತಿಗಳಿಗೆ, ಬಣ್ಣ- ವಾಸನೆ- ರುಚಿ- ದೃಶ್ಯಗಳಿಗೆ ತನ್ನನ್ನು ಯಾವ ಪರಿ ತೆರೆದುಕೊಂಡು ಸ್ಪಂದಿಸುತ್ತಿರುತ್ತದೆ ಎಂಬುದನ್ನು ಗಮನಿಸಿ. ಬಹುತೇಕ ಮಗುವಿನ ಬಾಲ್ಯದ ಐದು ವರ್ಷಗಳಲ್ಲಿ ಅದು ಪಡೆದದ್ದೇ ಅದರ ಪ್ರಜ್ಞೆಯನ್ನು ಗಾಢವಾಗಿ ರೂಪಿಸುತ್ತದೆ. ಅದರಿಂದಾಚೆಗೆ ಅದು ಬೆಳೆಯುವುದೇನಿದ್ದರೂ ಮನಸ್ಸು- ಬುದ್ಧಿಯ ವಲಯದಲ್ಲಿ ಮಾತ್ರ. ಹೀಗಾಗಿಯೇ, ವಾಸ್ತವವನ್ನು ಅದು ಇದ್ದಂತೆ ನೋಡಬೇಕಾದರೆ ಮಗುವಿನ ಕಣ್ಣು ಬೇಕು. ಅದು ಬಲವಂತವಾಗಿ ಬರುವುದಿಲ್ಲ. ಪ್ರೀತಿಯಿಂದ, ಆತ್ಮೀಯತೆಯಿಂದ, ಇದೆಲ್ಲ ತನ್ನದು, ಇವರೆಲ್ಲ ತನ್ನವರು ಎಂಬ ಅರಿವಿನಿಂದ ಮೂಡುವಂಥದು ಅದು.

• ಪೃಥೆ ಮುನ್ನಿ

ಲವ್‌ಎವೆರಿ ಬಾಡಿ

ನಮ್ಮ ಹೊಕ್ಕಳು ಸಾವಿರಗಟ್ಟಲೆ ಸೂಕ್ಷ್ಮ ಜೀವಿಗಳಿಗೆ ವಾಸಸ್ಥಾನವಾಗಬಲ್ಲದು ಎನ್ನುವುದನ್ನು ನಂಬುತ್ತೀರಾ? ದೇಹ ಶಾಸ್ತ್ರ ವಿಜ್ಞಾನಿಗಳು, ವ್ಯಕ್ತಿಯ ಹೊಕ್ಕಳಿನಲ್ಲಿ ಸರಾಸರಿ 67 ವಿವಿಧ ಜಾತಿಯ ಬ್ಯಾಕ್ಟೀರಿಯಾಗಳ ಇವೆ



ಎನ್ನುವುದನ್ನು ಕಂಡುಹಿಡಿದಿದ್ದಾರೆ. ಈ ಅಧ್ಯಯನದಿಂದ ಒಟ್ಟು 2,300 ಬಗೆಯ ಬ್ಯಾಕ್ಟೀರಿಯಾಗಳನ್ನು ಪತ್ತೆ ಹಚ್ಚಲಾಗಿದೆ. ಇವುಗಳಲ್ಲಿ 2,188 ಜಾತಿಯ ಬ್ಯಾಕ್ಟೀರಿಯಾಗಳಲ್ಲಿ, ಬಹುಪಾಲು ಹೊಕ್ಕಳಿನಲ್ಲಿ ಮಾತ್ರ ಇರುತ್ತವೆ. ಸ್ಟ್ಯಾಫಿಲೋಕೊಕಸ್ ನಂತಹ ಕೆಲವು ಸೂಕ್ಷ್ಮಜೀವಿಗಳು ಕೇವಲ ಹೊಕ್ಕಳಿನಲ್ಲಿ ತಮ್ಮ ಅಸ್ತಿತ್ವ ಸ್ಥಾಪಿಸಿಕೊಳ್ಳುವುದಷ್ಟೇ ಅಲ್ಲದೆ ಇವು ವಿವಿಧ ರೀತಿಯ ಸೋಂಕುಗಳಿಗೂ ಕಾರಣವಾಗಬಹುದು. ಹೀಗಾಗಿ ನಿತ್ಯವೂ ಸ್ನಾನ ಮಾಡುವಾಗ ಹೊಕ್ಕಳನ್ನು ಸ್ವಚ್ಛಗೊಳಿಸುವುದು ಅತಿಮುಖ್ಯ.

• ದೇಹಾಭಿ'ಮಾಣಿ'

ಮತ್ತೆ ಬಂದ ಋತುಗಳ ರಾಜ

ವಸಂತ ಪ್ರಕೃತಿಯಲ್ಲಿ ತರುವ ಬದಲಾವಣೆಯನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ಅದರಲ್ಲೊಂದು ಚೆಂದನೆಯ ನೀತಿ ಪಾಠ ಅಡಕವಾಗಿದೆ. ಮಳೆಯ ರಭಸಕ್ಕೆ ತತ್ತರಿಸಿ ಹಿಂಜಿಕೊಂಡಂತಾದರೂ, ಚಳಿಯ ಹೊಡೆತಕ್ಕೆ ಪತರುಗುಟ್ಟಿ ಎಲೆಯನ್ನೆಲ್ಲಾ ಬೋಳಿಸಿಕೊಂಡರೂ ದಿಟ್ಟವಾಗಿ ಅದನ್ನೆಲ್ಲ ಎದುರಿಸಿ ನಿಲ್ಲುವ ಗಿಡ-ಮರಗಳ ಆಶಾವಾದ ನಮಗೆ ಸ್ಫೂರ್ತಿಯಾಗಬೇಕು

ಆಕಾಶದಲ್ಲಿನ ಚಪ್ಪರವೇ ಕುಸಿದು ಬಿದ್ದಂತೆ ಬಿಡುವಿಲ್ಲದೇ ಮೂರ್ನಾಲ್ಕು ತಿಂಗಳು ಸೋರುವ ಮಳೆ ತರುವ ಕಿರಿಕಿರಿ, ನಂತರದ ಕೆಲವು ತಿಂಗಳು ಮೈಮನ ಜಡ್ಡುಗಟ್ಟಿಸುವ ಚಳಿಗಾಲ ತೆರೆಮರೆಗೆ ಸರಿಯುವ ಸಮಯ ಬಂದಾಗ ಅವರ್ಚನೀಯ ಆನಂದ. ವಸಂತನ

ಇಹದ ತಳಹದಿ

• ಶುಭಶ್ರೀ ಭಟ್ಟ

ಆಗಮನಕ್ಕಾಗಿ ಸಕಲ ಜೀವರಾಶಿಗಳಷ್ಟೆ ಅಲ್ಲದೆ ಸ್ವತಃ ಭೂಮಿತಾಯಿ ಕೂಡ ಅಷ್ಟೇ ಶ್ರದ್ಧೆಯಿಂದ ಅಲಂಕರಿಸಿಕೊಂಡು ಕಾಯುತ್ತಾಳೆ. ರವಿ ಕಾಣದ್ದನ್ನು ತಮ್ಮ ಕಣ್ಣೊಳಗಿಂದ ಕಾಣುವ ಕವಿಗಳಿಗಂತೂ ವಸಂತನೆಂದರೆ ಇನ್ನಿಲ್ಲದ ಸಂಭ್ರಮ.

ವಸಂತ ಬಂದ, ಋತುಗಳ ರಾಜ ತಾ ಬಂದ
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ,
ಚಳಿಯನು ಕೊಂದ, ಹಕ್ಕಿಗಳುಲಿಗೆ ಚೆಂದ,
ಕೂವೂ , ಜಗ್ ಜಗ್, ಪುವ್ವೀ, ಟೂವಿಟ್ಟವೂ!
-ಬಿ.ಎಂ.ಶ್ರೀಕಂಠಯ್ಯ ಎಂಬ ಕವಿವಾಣಿಯಂತೆ

ಋತುಗಳ ರಾಜ ವಸಂತ ತಾನು ಬರುವಾಗ ಕೇವಲ ಪ್ರಕೃತಿಯಲ್ಲಿ ಸೊಬಗು ಮೂಡಿಸುವುದಷ್ಟೇ ಅಲ್ಲ, ಜನರ ಮನಸಿನಲ್ಲೂ ಖುಶಿಯ ಹೂನಗೆಯ ತರುತ್ತಾನೆ. ಹಳದಿ ಹೂಗಳಿಂದ ಚಿತ್ರಿಸಿಕೊಂಡ ಹಸಿರು ಸೀರೆಯನ್ನುಟ್ಟು, ಮಾವು-ಬೇವಿನ ಕುಪ್ಪಸ ತೊಟ್ಟು, ಸೀತಾಳೆದಂಡೆಯ ಮಾಲೆ ಮುಡಿದು, ದೇವಲೋಕದಿಂದ ಬಿದ್ದ ನಕ್ಷತ್ರದ ತುಂಡಿನಂತಿರುವ ಎರಜಲು (ರಂಜೆ ಹೂ) ಹೂವಿನ ಮೂಗುತಿ, ಹೊಂಗೆ ಹೂವ ಕಿರೀಟ ತೊಟ್ಟು ಮದುವಣಗಿತ್ತಿಯಂತೆ ಅಲಂಕರಿಸಿಕೊಂಡ ಭೂಮಿಯಂತಹ ತಾಯಿ ತೂಕದ ಹೆಣ್ಣನ್ನೇ ಕುಣಿಯುವಂತೆ ಮಾಡುವುದನ್ನು ಕವಿ ವರ್ಣಿಸಿದ ರೀತಿ ಇಲ್ಲಿ ಅನನ್ಯ.

ಕಾಲದ ಮುಂದೆ ಎಲ್ಲರೂ ಸಮ
ಒಂದೇ ಒಂದು ಎಲೆಯ ಕುರುಹೂ ಇರದಂತ

ಮರ-ಗಿಡಗಳೂ ವಸಂತಕಾಲ ಬಂದಾಗ ಚಿಗುರಿಯೇ ಚಿಗುರುತ್ತದೆ. ಬೋಳಾದ ವೃಕ್ಷದ ಶಿರದ ತುಂಬಾ ಹೂಗೊಂಚಲ ಗುಂಗುರು. ಬದುಕಿನ ಪ್ರತಿ ತಿರುವಿನಲ್ಲಿ ಎದುರಾಗುವ ಕೆಲವು ಅತ್ಯಂತ ಕೆಟ್ಟ ಸಮಯಕ್ಕೂ ಅದರದ್ದೇ ಆದ ಅಂತ್ಯವಿದ್ದೇ ಇರುತ್ತದೆ, ಅದಕ್ಕೆ ಕುಗ್ಗದೆ ಸಹನೆಯಿಂದ ಕಾದರೆ ಸ್ಥೈರ್ಯದಿಂದ ಎದುರಿಸಿ ನಿಂತರೆ ಮತ್ತೊಮ್ಮೆ ಸಂಭ್ರಮ, ಗೆಲುವು ಎನ್ನುವುದು ಚಿಗುರೊಡೆದು ಪಲ್ಲವಿಸಬಹುದು. ಚಳಿಗಾಲ ಬಡವರಿಗಷ್ಟೇ, ವಸಂತಗಾಲ ಕೇವಲ ಸಿರಿವಂತನಿಗೆ ಎಂಬುದೆಲ್ಲ ಇಲ್ಲ. ಕಾಲದ ಮುಂದೆ ಎಲ್ಲರೂ, ಎಲ್ಲವೂ ಸಮ. ವಸಂತ ಋತು ಬಂತೆಂದರೆ ರೈತರಿಗದು ಪರ್ವಕಾಲ. ವರ್ಷವಿಡೀ ಮೈಮುರಿದು ದುಡಿವ ರೈತ ತಾನು ಬೆಳೆದದ್ದನ್ನ ಸಂಗ್ರಹಿಸಿ ಸುಗ್ಗಿ ಹಬ್ಬ ಆಚರಿಸುತ್ತಾ ತನ್ನ ಕಷ್ಟಗಳನ್ನು ನುಂಗುತ್ತಾನೆ. ಪ್ರತೀ ಸಲ ಬರುವಾಗಲೂ ಒಣಗಿದ, ಸೊರಗಿದ ಹಳೇ ಬೇರಿನಲ್ಲಿಯೇ ಹೊಸ ಚಿಗುರು, ಹೂಕಂಪು ಹೊತ್ತು ತರುವ ವಸಂತ ಸಕಲ ಜೀವರಾಶಿಗಳು ನಾವಿನ್ಯತೆಯಿಂದ ನಲಿಯುವುದನ್ನು ಕಾಣುವುದೇ ಒಂದು ಬಗೆಯ ಅಚ್ಚರಿಯ ಸಂಗತಿ.

ಕವಿಗಳಿಗಂತೂ ಸಂಭ್ರಮವೋ ಸಂಭ್ರಮ!

ವಸಂತ ಋತು ಬಂತೆಂದರೆ ಸಂಭ್ರಮಿಸುವುದೂ ಕೇವಲ ನಿಸರ್ಗ ಮತ್ತು ಜೀವರಾಶಿಗಳಷ್ಟೇ ಅಲ್ಲ, ಕವಿಗಳೂ ಕೂಡ ಹೌದು. ಕವಿಗಳಿಂತೂ ವಸಂತನೆಂದರೆ ರೂಪಕಗಳ ಆಗರ, ಋತುಗಳ ರಾಜನನ್ನು ವರ್ಣಿಸಿದ್ದಷ್ಟು ಸಾಲದು. ನಮ್ಮ ಒಳಗಣ್ಣನ್ನು ತೆರೆದು ನೋಡಿದರೆ ನಿಸರ್ಗದಿಂದ ಕಲಿಯುವಂತಹ ಪಾಠ ಬಹಳವಿರುತ್ತದೆ. ವಸಂತನೇ ಯಾಕೆ ಋತುಗಳ ರಾಜ ಎಂಬುದನ್ನು ಅರ್ಥೈಸಿಕೊಳ್ಳಲು ನಾವು 'ಮೈಸೂರು ಮಲ್ಲಿಗೆ ಕವಿ' ಎಂದೇ ಪ್ರಖ್ಯಾತರಾದ ಶ್ರೀಯುತ ಕೆ.ಎಸ್.ನರಸಿಂಹಸ್ವಾಮಿಯವರ 'ಋತು ವೈಭವ' ಎಂಬ ಗೀತಗುಚ್ಛವನ್ನು ಓದಬೇಕು. ಅದರಲ್ಲಿಯ ಒಂದು ಚರಣ ಮಾತ್ರ ಇನ್ನಿಲ್ಲದಂತೆ ಕಾಡಿಸುತ್ತದೆ.

ಮರದ ತುದಿಯಲ್ಲಿ ಕೋಗಿಲೆ ತಂಗಿ ಹಾಡುತ್ತ
ನಲಿವಿನೊಂದಿಗೆ ನೋವ ಬೆರೆಸುತಿರಲು,
ಹೂ ಮಗುವಿನುಸಿರಂತೆ ಮೆಲುನಡೆಯ ತಂಬೆಲರು
ಹಸಿದ ಬಡವನ ಕಣ್ಣನೊರಸುತಿರಲು, -ಕೆ.ಎಸ್.ನ.

ಇದರಲ್ಲಿ ಕವಿ ವಸಂತನ ಬಿಟ್ಟರೆ ಮತ್ಯಾವ ಋತುಗಳಿಗೂ ರಾಜನಾಗುವ ಅರ್ಹತೆಯಿಲ್ಲ ಎಂದು ಸೂಚ್ಯವಾಗಿ ಹೇಳುತ್ತಾರೆ. ಹೂಬಿಟ್ಟ ಮಾವಿನ ಮರದ ತುದಿಯಲ್ಲೆಲ್ಲೋ ಕುಳಿತು ನಲಿವಿನಿಂದ ಹಾಡುವ ಕೋಗಿಲೆಯ ಮಾಧುರ್ಯಕ್ಕೆ ನೋವಿಲ್ಲದಿದ್ದಿಟ್ಟ ಮನಕೂ ತುಸು ತಂಪಿನ ಸಿಂಚನಗೈಯಬಲ್ಲ ಶಕ್ತಿಯಿರುವುದೂ ಕೂಡ ವಸಂತಕ್ಕೆ. ರಟ್ಟೆ ಮುರಿಯುವಂತೆ ದುಡಿದು ಹಟ್ಟಿಯೊಳಗೆ ಮೈಚಾಚಿದ ಕಡುಬಡವನ ಕಣ್ಣ ಹನಿಯನ್ನು ಹೂವಿನಷ್ಟು ಮೃದುವಾದ ಮಗುವಿನ ಉಸಿರಿನ ಹಾಗೇ ತೂಗುತ್ತಾ ಒರೆಸುವ ತಾಕತ್ತಿರುವುದು ವಸಂತದ ತಂಬೆಲರಿಗೆ. ಮಬ್ಬು ಹರಿಯದ ಹಾದಿಯಲಿ ದಿಕ್ಕೆಟ್ಟು ನಿಂತಾಗ ಪರಿಮಳದ ನಕ್ಷತ್ರಗಳ ಕಂಪನ್ನು ಸೋಕಿಸಿ ಕ್ಷಣಮಾತ್ರದಲ್ಲಿ ಆ ವಿಹ್ವಲತೆಯ ಮರೆಮಾಡಬಲ್ಲ ಈ ವಸಂತನನ್ನು ಋತುಗಳ ರಾಜನೆನ್ನದೇ ಇರಲಾದೀತೆ? ಒಮ್ಮೆ ಯೋಚಿಸಿ ನೋಡಿ.

ಮೈಮನವೂ ತಂಪು

ಋತುಗಳ ರಾಜ ಬರುತ್ತಿದ್ದಾನೆ ಎಂಬ ಸೂಚನೆಯನ್ನು ಮೊದಲು ಕೊಡುವುದೇ ಪ್ರಕೃತಿ. ಅದರಲ್ಲಿಯೂ ಮಾವು, ಬೇವು, ಹೊಂಗೆ ಮರಗಳು ಚಿಗುರೊಡೆದು ಕಳೆಗಟ್ಟಿಸಿಕೊಳ್ಳುತ್ತದೆ. ಸೊಂಪಾಗಿ ಬೆಳೆದು ನಿಂತ ಹೊಂಗೆಮರವನ್ನು ಕಣ್ತುಂಬಿಕೊಳ್ಳುವುದು ಎಷ್ಟು ಚೆಂದವೋ, ಅದರ ನೆರಳಲ್ಲಿ ನಿಂತು ಮೈಮನವ ತಂಪಾಗಿಸಿಕೊಳ್ಳುವುದೂ ಅಷ್ಟೇ ಚೆಂದದ ಅನುಭವ. ವರಕವಿ ಬೇಂದ್ರೆಯವರು ಇದನ್ನು ಬಹಳ ಆಪ್ತವಾಗಿ ಕಟ್ಟಿಕೊಡುವುದು ಹೀಗೆ:

ಹೊಂಗೆ ಹೂವ ತೊಂಗಲಲ್ಲಿ
ಭೃಂಗದ ಸಂಗೀತ ಕೇಳಿ
ಮತ್ತೆ ಕೇಳ ಬರುತ್ತಿದೆ
ಬೇವಿನ ಕಹಿ ಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ
ಜೀವಕಳೆಯ ತರುತ್ತಿದೆ-ದ.ರಾ.ಬೇಂದ್ರೆ'.

ಇಲ್ಲೊಂದು ಜೀವನ ಪ್ರೀತಿಯ ಪಾಠವನ್ನು ನಾವು ಕಲಿಯಬಹುದು. ಹೊಂಗೆ, ಮಾವು, ಬೇವಿನ ಎಲೆಗಳೆಲ್ಲವೂ ಉದುರಿ ಅದು ರೈತನ ತೋಟ-ಗದ್ದೆಗಳಿಗೆ ಫಲವತ್ತತೆ ಕೊಡುವ ಗೊಬ್ಬರವಾಗಿ ಮಾರ್ಪಡುವುದರಿಂದ ಪ್ರಕೃತಿ-ಮನುಷ್ಯನ ನಡುವೆ ಅವಿನಾಭಾವ ಸಂಬಂಧ ಬೆಳೆಯುತ್ತದೆ. ಇವೆಲ್ಲವುಗಳಿಂದ ಋತುಗಳ ರಾಜ ವಸಂತ ಕೇವಲ ಋತುಕಾಲವಲ್ಲ ಬದಲಿಗೆ ಪ್ರಕೃತಿಯೊಡನೆ ಸಕಲ ಜೀವರಾಶಿಗಳನ್ನು ಬೆಸೆಯುವ ಸೇತುವೆ ಅನ್ನಬಹುದು.

ಸ್ಮೃತಿ ಸಾಮರ್ಥ್ಯಕ್ಕೆ ಸಿದ್ಧಸೂತ್ರ

• ಹೊ.ರಾ.ಪರಮೇಶ್ ಹೊಡೇನೂರು

ಮರೆವು ಅನ್ನುವುದು ಮಹಾರೋಗ. ಎಷ್ಟೇ ಓದಿದರೂ, ಎಷ್ಟೇ ತಿಳಿದುಕೊಂಡಿದ್ದರೂ ಅವಶ್ಯ ಸಂದರ್ಭದಲ್ಲಿ ನೆನಪಿಗೆ ಬಾರದಿದ್ದರೆ ಎಲ್ಲವೂ ನಿರರ್ಥಕ. ವಿದ್ಯಾರ್ಥಿಗಳಿಗಂತೂ ನೆನಪಿನ ಶಕ್ತಿಯಷ್ಟು ಅದ್ಭುತ ವರ ಬೇರೊಂದಿಲ್ಲ. ಮರೆವನ್ನು ಹೋಗಲಾಡಿಸಿ ಸ್ಮೃತಿ ಸಾಮರ್ಥ್ಯವನ್ನು ಸುಧಾರಿಸಿಕೊಳ್ಳಲು ಕೆಲವೊಂದು ಸೂತ್ರಗಳು ಇಲ್ಲಿವೆ. ನಾವು ಕಲಿಯುವ ಅಂಶಗಳನ್ನು ಮತ್ತೆ ಮತ್ತೆ ಪುನರಾವರ್ತಿಸುವುದರಿಂದ ಜ್ಞಾಪಕದಲ್ಲಿ ದೀರ್ಘ ಕಾಲ ಉಳಿಯುತ್ತದೆ. ಕಲಿಯುವ ವಿಷಯ ವಸ್ತುವಿನ ಅರ್ಥವನ್ನು ಗ್ರಹಿಸಿಕೊಳ್ಳುವಾಗ ಅದರ ಮಾನಸಿಕ ಚಿತ್ರವನ್ನು ಮನಸ್ಸಿನಲ್ಲಿ ಮೂಡಿಸಿಕೊಳ್ಳುವುದು ಹೆಚ್ಚು ಪರಿಣಾಮಕಾರಿ.

- ನಮ್ಮ ಅಭ್ಯಾಸ ಉತ್ತಮ ಕಲಿಕಾ ವಾತಾವರಣದಲ್ಲಿ ಇರಬೇಕಾದ್ದು ಅತ್ಯವಶ್ಯಕ . ಹೊರಜಗತ್ತಿನ ಗದ್ದಲ, ದೂರದರ್ಶನದ ಕಾರ್ಯಕ್ರಮ ಧ್ವನಿವರ್ಧಕಗಳ ಕಿರುಚಾಟಗಳಿಂದ ಮುಕ್ತವಾಗಿದ್ದರೆ ಅಭ್ಯಾಸಕ್ಕೆ ತುಂಬಾ ಅನುಕೂಲ.
- ಕಲಿಯುವ ವಿಷಯಗಳಲ್ಲಿ ಸ್ಮೃತಿ ಗುರುತುಗಳನ್ನು ಪುಷ್ಟೀಕರಿಸಿಕೊಳ್ಳಲು ಜ್ಞಾನೇಂದ್ರಿಯಗಳ ಬಳಕೆ ಹೆಚ್ಚು ಪ್ರಯೋಜನಕಾರಿ.



- ಪರೀಕ್ಷೆಗಳು ಸಮೀಪ ಬಂದಾಗಷ್ಟೆ ಓದುವುದರ ಬದಲಾಗಿ, ಆಯಾ ಶೈಕ್ಷಣಿಕ ವರ್ಷದ ಆರಂಭದಿಂದಲೂ ನಿಯಮಿತವಾಗಿ ಅಭ್ಯಾಸ ಮಾಡುವುದು ಉತ್ತಮ. ಅಲ್ಲದೇ ಅಭ್ಯಾಸ ಸಂದರ್ಭದಲ್ಲಿ ಕ್ಲಿಷ್ಟವೆನಿಸುವ ಸಾಮರ್ಥ್ಯಗಳನ್ನು ಪುನರಾವರ್ತನೆ ಮಾಡಿ ಅರ್ಥೈಸಿಕೊಳ್ಳಲು ಅವಕಾಶ ಸಿಕ್ಕುತ್ತದೆ.
  ಸ್ಮರಣೆಯ ಸೂತ್ರಗಳನ್ನು ಅಳವಡಿಸಿಕೊಳ್ಳುವುದರಿಂದ ನೆನಪಿನ ಶಕ್ತಿ ವೃದ್ಧಿಸಿಕೊಳ್ಳಲು ಸಾಧ್ಯವಿದೆ. ಆಯಾ ವ್ಯಕ್ತಿಯ ಸಾಮರ್ಥ್ಯಗಳಿಗೆ ಸಂಬಂಧಿಸಿದಂತೆ ತಾವೇ ಒಂದೊಂದು ರೀತಿಯ ತಂತ್ರಗಳನ್ನು ಅಳವಡಿಸಿಕೊಳ್ಳಬಹುದು.
- ಬಹುಜನಪ್ರಿಯವಾದ್ವಐಆಗ್ವಕ್ಕ ಎಂಬ ಪದ ಪುಂಜದಿಂದ ಕಾಮನ ಬಿಲ್ಲಿನ ಏಳು ಬಣ್ಣಗಳ ಪರಿಚಯವನ್ನು ಅತೀ ಸರಳವಾಗಿ ಅರಿತುಕೊಳ್ಳಬಹುದು. ವಿ-ನೇರಳೆ, ಐ-ಊದು, ಬಿ-ನೀಲಿ, ಜಿ- ಹಸಿರು, ವೈ-ಹಳದಿ, ಒ-ಕಿತ್ತಳೆ ಮತ್ತು ಆರ್ -ಕೆಂಪು
- ಅಭಯ ಪದದಿಂದ ಸನ್ನೆಯ ವಿಧಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. ಅ=ಅನಿಸಿಕೆ, ಭ=ಬಲ, ಯ+ಯತ್ನ
- ಯಮಾತರಾಜ ಭಾನಸಲಗಂ ಎಂಬ ಅಕ್ಷರ ಸಮುಚ್ಚಯದಿಂದ ಕನ್ನಡ ವ್ಯಾಕರಣದಲ್ಲಿ ಗಣ ಪ್ರಸ್ತಾರ ಹಾಕಿ ವಿಂಗಡಿಸಲು ಸುಲಭವಾಗುತ್ತದೆ.
- ಸೌರವ್ಯೂಹದ ಎಂಟು ಗ್ರಹಗಳ ಹೆಸರುಗಳನ್ನು ಸೂರ್ಯನಿಂದ ಆರಂಭಗೊಂಡು ಕ್ರಮಾನುಗತವಾಗಿ ಹೆಸರಿಸವಲು ಬುಶುಭೂಮಂ ಗುಶಯುನೆ ಎಂಬ ಹ್ರಸ್ವ ರೂಪದಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳಬಹುದು.
- ಕಲಿಯುವ ವಿಷಯ ವಸ್ತುವನ್ನು ಅನುಕೂಲಕರ ರೀತಿಯಲ್ಲಿ ಗುಂಪುಗಳನ್ನಾಗಿ ಸಂಘಟಿಸಿಕೊಂಡರೆ ಸ್ಮೃತಿ ಉತ್ತಮಗೊಳ್ಳುತ್ತದೆ.
- ಮಗ್ಗಿಗಳನ್ನು ಸುಲಭವಾಗಿ ಕಲಿಯಲು ರಾಗಬದ್ಧವಾಗಿ ಅಭ್ಯಾಸ ಮಾಡುವುದು. ಕಲಿಕಾ ಅಭ್ಯಾಸ ಚಟುವಟಿಕೆಯು ನಿರಂತರವಾದರೆ, ಆಸಕ್ತಿ ಕಡಿಮೆಯಾಗುತ್ತದೆ. ಆದ್ದರಿಂದ ನಡುವೆ ಆಗಾಗ ವಿಶ್ರಾಂತಿ ಪಡೆಯುವುದು ಅತ್ಯಂತ ಅಗತ್ಯ. ಮತ್ತೊಂದು ಪ್ರಮುಖವಾದ ಸ್ಮರಣಶಕ್ತಿ ಸುಧಾರಿಸುವ ವಿಧಾನವೆಂದರೆ,
- ಪೂರ್ವಾವಲೋಕನ - ಅಭ್ಯಾಸ ಮಾಡಿದ ಇಡೀ ಘಟಕವನ್ನು ಸಾರಾಂಶ ಗ್ರಹಿಸುವ ಸಲುವಾಗಿ ಅಲ್ಲಲ್ಲಿ ಕೆಲವು ಮುಖ್ಯಾಂಶಗಳನ್ನು ನೆನಪಿಸಿಕೊಳ್ಳುವುದು.
- ಪ್ರಶ್ನಿಸುವಿಕೆ -ವಿಷಯವನ್ನು ಗ್ರಹಿಸಿದ ನಂತರ ಉತ್ತರ ಹುಡುಕಬೇಕಾದಂತಹ ಪ್ರಶ್ನೆಗಳನ್ನು ರಚಿಸುವುದು.
- ಓದು -ಊಹಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ದೃಷ್ಟಿಯಿಂದ ವಿಷಯವನ್ನು ನಿಧಾನವಾಗಿ ಓದುವುದು.
- ಮನನ -ಮುಖ್ಯವಾದ ಅಂಶಗಳನ್ನು ಪುನಃ ಸ್ಮರಿಸಲು ಪ್ರಯತ್ನಿಸಿ ಆ ಮಾಹಿತಿಗಳನ್ನು ಮನನ ಮಾಡಿಕೊಳ್ಳುವುದು.
- ಪರೀಕ್ಷೆ - ಇಡೀ ಘಟಕಗಳನ್ನು ಅಭ್ಯಾಸ ಮಾಡಿದ ನಂತರ, ಕಲಿತ ವಿಷಯಗಳನ್ನು ಉತ್ತರಗಳ ರೂಪದಲ್ಲಿ ಪ್ರಶ್ನೆಗಳ ಮೂಲಕ ತಮ್ಮನ್ನು ತಾವೇ ಪರೀಕ್ಷೆಗೊಳಪಡಿಸಿಕೊಂಡಾಗ ಕಲಿಕೆ ದೃಢವಾಗುತ್ತದೆ.
- ವಿಷಯಗಳನ್ನು ಅಭ್ಯಾಸ ಮಾಡುವಾಗ, ಪುನಃಸ್ಮರಣೆ ಕೈಗೊಳ್ಳುವಾಗ ತಡೆಯುಂಟು ಮಾಡುವ ಉದ್ವೇಗ, ಆತಂಕ, ಗದ್ದಲಗಳಿಂದ ಮುಕ್ತವಾಗಿರಬೇಕು.
- ಪ್ರಮುಖವಾಗಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವಿರಬೇಕು. ಪೂರ್ವಾಗ್ರಹಪೀಡಿತ ನಕಾರಾತ್ಮಕ ಧೋರಣೆಗಳಿಗೆ ಅವಕಾಶ ಕೊಡಬಾರದು. ಸಮಾಧಾನ ಮತ್ತು ಏಕಾಗ್ರತೆಯೊಂದಿಗೆ ಅನುಕೂಲಕರ ವಾತಾವರಣದಲ್ಲಿ ಅಭ್ಯಾಸ ಮಾಡಬೇಕು.

ಇವೆಲ್ಲಕ್ಕೂ ಮುಖ್ಯವಾದ ಅಂಶವೆಂದರೆ, ಪರೀಕ್ಷೆ ತೇರ್ಗಡೆಗಾಗಿ ಮಾತ್ರ ಎಂದು ಭಾವಿಸದೆ ಜ್ಞಾನಾರ್ಜನೆಗಾಗಿ ಎಂದು ತಿಳಿದು ಇಷ್ಟಪಟ್ಟು ಕಲಿಯುವುದರಿಂದ ನಮ್ಮ ಫಲಿತಾಂಶ ಅತ್ಯುತ್ತಮವಾಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ತಂತ್ರೋಪಾಯಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಂಡಲ್ಲಿ ಪರೀಕ್ಷೆಗಳನ್ನು ಸಮರ್ಥವಾಗಿ ಎದುರಿಸಿ ಯಶಸ್ಸು ಪಡೆಯಬಹುದು.

ಗಂಗೆ ತಂದ ಗೌರಿಯ ಸಾಹಸಗಾಥೆ

• ಸುರೇಂದ್ರ ಪೈ

ಮೊನ್ನೆ ಕೊಪ್ಪಳದ ಗವಿಮಠದ ಜಾತ್ರೆಗೆ ಹೋದಾಗ ಅಲ್ಲಿ ನೆರೆದಿದ್ದ ಲಕ್ಷಾಂತರ ಜನರೆದುರು, ಸ್ವತಃ ಗವಿಮಠದ ಶ್ರೀಗಳು 'ಗೌರಿ ನಾಯ್ಕ' ಎಂಬ ಸಾಮಾನ್ಯ ಮಹಿಳೆಯ ಅಸಾಮಾನ್ಯ ಸಾಧನೆ ಬಗ್ಗೆ ಹೇಳಿದ್ದರು. ಭಕ್ತ ಹಿತ ಚಿಂತನ ಸಭೆಯಲ್ಲಿ ಆಕೆಯನ್ನು ಪರಿಚಯಿಸಿದ ನುಡಿಗಳನ್ನು ಕೇಳಿ, ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿರುವ ಈ ಸಾಹಸಿ ಬಗ್ಗೆ ತಿಳಿಯಲೇ ಬೇಕೆಂದು ಅನಿಸಿತು.

ಗಂಗೆಯನ್ನು ಭೂಮಿಗೆ ತರುವುದೆಂದರೆ ಭಗೀರಥ ಪ್ರಯತ್ನವೇ ಮಾಡಬೇಕಾಗುತ್ತದೆ. ಹಾಗೆಯೇ ಶಿರಸಿಯ ಗಣೇಶ ನಗರದ ನಿವಾಸಿ ಗೌರಿ ನಾಯ್ಕ್ ತಮ್ಮ ತೋಟ ಉಳಿಸಲು ಒಂಟಿಯಾಗಿ ಬಾವಿ ತೋಡಲು ಶುರು ಮಾಡಿದ್ದರು. ಮಣ್ಣು ಅಗೆದು ಬಕೆಟ್‌ನಲ್ಲಿ ತುಂಬಿ ಪುನಃ ಮೇಲೇರಿ ಹಗ್ಗದಿಂದ ಎತ್ತಿ ಹೊರ ಹಾಕುತ್ತಾ, ಬೆಳಿಗ್ಗೆ ಎಂಟು ಗಂಟೆಯಿಂದ ಸಂಜೆಯವರೆಗೆ ಒಬ್ಬಳೇ ದುಡಿದ ಸಾಹಸಿ ಈಕೆ. ಹೀಗೆ ಸುಮಾರು 60- 65 ಅಡಿ ಆಳದ ಬಾವಿಯನ್ನು ಏಕಾಂಗಿಯಾಗಿಯೇ ತೋಡಿ ಎಲ್ಲರೂ ನಿಬ್ಬೆರಗಾಗುವಂತೆ ಮಾಡಿದ್ದಾರೆ..

ತೋಡಿದ ಬಾವಿ ಮುಚ್ಚಿಸಿದರು

ಕೊಪ್ಪಳದ ಸನ್ಮಾನ ಮುಗಿದ ಕೆಲವು ದಿನಗಳ ಬಳಿಕ ಸಾರ್ವಜನಿಕರ ಅನುಕೂಲಕ್ಕೆ, ಅಲ್ಲಿರುವ ಅಂಗನವಾಡಿ ಮಕ್ಕಳು, ಇತರರಿಗೆ ಬೇಸಿಗೆಯಲ್ಲಿ ದಾಹ ತಣಿಸುವ ನಿಸ್ವಾರ್ಥ ಉದ್ದೇಶದಿಂದ ಮತ್ತೆ ಬಾವಿ ತೋಡಲು ಗೌರಿ ಪ್ರಾರಂಭಿಸಿದರು. ಆದರೆ ಇನ್ನೇನು ಏಳೆಂಟು ಅಡಿ ಅಗೆದರೆ ನೀರು ಬರುವ ಸಾಧ್ಯತೆ ಇದೆ ಎಂಬ ಸಮಯದಲ್ಲೇ, ತಾಲೂಕು ಆಡಳಿತ ಇನ್ನು ಮುಂದೆ ಬಾವಿ ತೋಡುವ ಕಾರ್ಯ ಮಾಡದಂತೆ ತಡೆ ಒಡ್ಡಿ ಬಾವಿಗೆ ಹಲಗೆ ಹಾಕಿ ಮುಚ್ಚಿಸಿದ್ದರು. ಈ ಕಾರ್ಯಕ್ಕೆ ಆಕೆಯ ಜೀವರಕ್ಷಣೆ ಹಾಗೂ ಪರವಾನಗಿ ಪಡೆಯದ ನೆಪ ನೀಡಲಾಗಿತ್ತು. ನಂತರ ಆಡಳಿತದಿಂದ ಪರವಾನಗಿ ಪಡೆದು ಕೊನೆಗೂ ಗೌರಿಯ ಸತತ ಪ್ರಯತ್ನದಿಂದಾಗಿ ಗಂಗೆ ಒಲಿದು ಬಿಟ್ಟಿದ್ದಾಳೆ. ಬಾವಿ ತುಂಬಾ ಸಿಹಿನೀರಿನ ಸಿಂಚನವಾಗಿದೆ. ಈಗ ಆಕೆಯ ಸಂತಸಕ್ಕೆ ಪಾರವೇ ಇಲ್ಲದಂತಾಗಿದೆ. ಮಳೆ ನೀರು ಕೊಯ್ಲಿನ ಕಾರ್ಯಕ್ಕೆ ಜಾಗೃತಿ ಮೂಡಿಸುವುದನ್ನು ಮರೆತ ನಮ್ಮ ಆಡಳಿತ ವ್ಯವಸ್ಥೆಯ ನಡುವೆ ಯಾರ ಬಳಿಯೂ ಸಹಾಯ ಕೇಳದೆ ಒಂಟಿಯಾಗಿ ಬಾವಿ ತೆಗೆಯುವ ಕಾರ್ಯ ಮಾಡಿ 'ನಮ್ಮೆಲ್ಲರ ದಾಹ ತಣಿಸುವ ಗಂಗೆಯನ್ನು ಭೂಮಿಗೆ ತಂದ' ಗೌರಿಯ ಕಾಯಕದಿಂದ ಪಾಠ ಕಲಿಯಬೇಕಿದೆ. ಈಕೆಯ ಏಕಾಂಗಿ ಛಲ, ಸಾಧನೆ ನಮ್ಮೆಲ್ಲರಿಗೂ ಸ್ಫೂರ್ತಿ.

ಸನ್ಮಾನ ಯಾಕೆ? ಹಾರ ಭಾರ!

ದುಡಿಯುವ ಮನಸ್ಸು, ಛಲ, ಪರಿಶ್ರಮ ವ್ಯಕ್ತಿಯನ್ನು ಹೇಗೆ ಬೆಳೆ ಸುತ್ತದೆಂಬುದಕ್ಕೆ ಗೌರಿ ನಾಯ್ಕ್ ಬದುಕು ಸಾಕ್ಷಿ. ಪತಿಯ ಅಗಲಿಕೆ ಯಿಂದ ಧೃತಿ ಗೆಡದೆ ಪುಟ್ಟ ಮಕ್ಕಳನ್ನು ಸಾಕಿ ಸಲುಹಿದರು. ಮನೆ ಪಕ್ಕದಲ್ಲಿ ಅಡಿಕೆ ನೆಟ್ಟು ನೀರಿಲ್ಲದೆ ತೋಟ ಒಣಗುವಾಗ ಬಾವಿ ತೋಡುವ ಕಾರ್ಯ ಮಾಡಿ ಯಶಸ್ವಿಯಾದವರು. ಗೌರಿಯ ಸಾಹಸ ಗುರುತಿಸಿ ಸಮಾಜದ ಹಲವು ಸಂಘ ಸಂಸ್ಥೆಗಳು ಗೌರವಿಸಿದರೆ , 'ನಾನು ನನಗೆ ನೀರಿಲ್ಲವೆಂದು ನನ್ನ ಕೆಲಸ ಮಾಡಿಕೊಂಡರೆ ಈ ಸನ್ಮಾನ ಏಕೆ? ಹಾರ ನಂಗೆ ಭಾರ ಆಗಿದೆ' ಎಂಬುದು ಗೌರಿಯ ಹೇಳುವ ಮಾರ್ಮಿಕ ಮಾತು. ಕೊಪ್ಪಳದ ಜಾತ್ರೆಯಲ್ಲಿ ಈಕೆಯ ಸಾಧನೆ ಗುರುತಿಸಿ ವಿಶೇಷ ಸನ್ಮಾನ ಮಾಡಲಾಗಿತ್ತು. ಶಿರಸಿಯಂತಹ ಮಲೆನಾಡಿನ ಪ್ರದೇಶದಲ್ಲಿ ತೆರೆದ ಬಾವಿ ಬಳಕೆ ಎಲ್ಲೆಡೆ ಸಾಮಾನ್ಯ ವಾಗಿದೆ. ಈಗ ಕೊಳವೆ ಬಾವಿಗಳು ಹೆಚ್ಚುತ್ತ ಅಂತರ್ಜಲ ಮಟ್ಟ ಕುಸಿ ದಿದೆ. ಪಾರಂಪರಿಕ ತೆರೆದ ಬಾವಿ ತೋಡುವ ಕಾರ್ಯವನ್ನು ರಾಜ್ಯಕ್ಕೆ ನೆನಪಿಸುವ, ಸ್ಥಳೀಯ ಜ್ಞಾನಕ್ಕೆ ಮಹತ್ವ ನೀಡುವ ಕಾರ್ಯ ಗೌರಿಯದು.

ಒಗ್ಗರಣೆಯ ಘಂ ಎಂಬ ಘಮಲು

• ವಿಜಯಕುಮಾರ್‌ಕಟ್ಟೆ

ಅಡುಗೆ ಮಾಡುವಾಗ ಏನೂ ಮಾಡದಿದ್ರೂ ಸರಿ. ಆದರೆ ಅಡುಗೆಯ ಅತ್ಯಂತ ಕೊನೆಯ ಕಾರ್ಯವಾದ ಒಗ್ಗರಣೆ ಹಾಕಲು ಮರೆತರೆ ಅಲ್ಲಿಗೆ ಮುಗಿಯಿತು . ಅಷ್ಟು ಮಾಡಿದ್ದೆಲ್ಲ ವ್ಯರ್ಥ ಎನ್ನುವಂತೆ ತಿಂಡಿ ತಿನ್ನುವಾಗ ಅಥವಾ ಊಟ ಮಾಡುವಾಗ ಎಲ್ಲರ ಮುಖಭಾವ ಏನೋ ಮಿಸ್ ಆಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಯಾರು ಏನೇ ಹೇಳಿದರು ಒಗ್ಗರಣೆ ಇಲ್ಲದ ಅಡುಗೆ ಅಪೂರ್ಣ. ನಮ್ಮ ಭಾರತೀಯ ವೈವಿಧ್ಯಮಯ ಖಾದ್ಯಗಳು ಜಗತ್ಪ್ರಸಿದ್ದ. ಇಂತಹ ರುಚಿ ರುಚಿಯಾದ ತಿಂಡಿ , ತಿನಿಸುಗಳಿಗೆ ಒಂದು ಟೇಸ್ಟ್ ಮತ್ತು ಮೆರುಗು ಕೊಡುವ ಅದಕ್ಕೆ ಹಾಕುವ ಒಗ್ಗರಣೆಗಳ ಬಗ್ಗೆ ತಿಳಿಯದೇ ಹೋದರೆ ಅಡುಗೆ ಮಾಡುವ ರೀತಿಯಲ್ಲಿ ಏನೋ ಕಳೆದುಕೊಂಡ ಹಾಗೆ . ಒಗ್ಗರಣೆ ತನಗೆ ಎಲ್ಲ ಸಾಮಗ್ರಿಗಳು ಬೇಕು ಎಂದು ಕೇಳುವುದಿಲ್ಲ. ಸ್ವಲ್ಪ ಎಣ್ಣೆ, ಸಾಸಿವೆ ಅಥವಾ ಜೀರಿಗೆ, ಇಂಗು, ಕರಿಬೇವು ಇಷ್ಟು ಇದ್ದರೆ ಸಾಕು . ಇಷ್ಟರಲ್ಲೇ ಅದ್ಭುತವನ್ನು ಈ ಒಗ್ಗರಣೆ ಸೃಷ್ಟಿ ಮಾಡಿಬಿಡುತ್ತದೆ. ಹೆಚ್ಚು ಹೊತ್ತು ಬೇಕಾಗೂ ಇಲ್ಲ. ಸೌಟು ಅಥ ವಾ ಬಾಣಲೆಯಲ್ಲಿ ಎಣ್ಣೆ ಕಾದ ಮೇಲೆ ಸಾಸಿವೆ, ಜೀರಿಗೆ ಹಾಕಿ ಅದು ಚಟ-ಪಟ ಸಿಡಿಯುವಾಗ ಕರಿಬೇವು, ಒಣ ಮೆಣಸಿನಕಾಯಿ ಹಾಕುತ್ತಿದ್ದಂತೆ ಒಂದು ನಿಮಿಷದೊಳಗೆ ರೆಡಿ. ಈ ಒಗ್ಗರಣೆ ಬಹುಪಯೋಗಿ. ಕೋಸಂಬರಿ, ರಾಯತ , ಪಲ್ಯ, ಚಟ್ನಿ ಇವುಗಳಿಗೆ ಉಪಯೋಗ.

ಪರಿಮಳಕ್ಕೆ ವಿಶೇಷ ಸ್ಥಾನ

ಈ ಸಿಂಪಲ್ ಒಗ್ಗರಣೆ ಜತೆ ಕಡಲೆಬೇಳೆ, ಉದ್ದಿನಬೇಳೆ, ಕಡಲೆಬೀಜ , ಮೆಣಸಿನಕಾಯಿ ಹಾಕಿದರೆ ಖ್ಯಾತ ತಿಂಡಿಗಳಾದ ಚಿತ್ರಾನ್ನ, ಪುಳಿಯೋಗರೆ, ಉಪ್ಪಿಟ್ಟು, ಅವಲಕ್ಕಿ, ಉಸಲಿ ಇವುಗಳಿಗೆ ಮನೆಗೆ ಫೌಂಡೇಶನ್ ಇದ್ದ ಹಾಗೆ. ಹದವಾಗಿ ಒಗ್ಗರಣೆ ಕೊಟ್ಟ ವಿಧ ವಿಧವಾದ ಪಲ್ಯಗಳನ್ನಂತೂ ತಿನ್ನುವುದೇ ಒಂದು ಸೊಗಸು. ಇನ್ನು ಸಾರಿಗೆ ಒಗ್ಗರಣೆ ಕೊಟ್ಟರೆ ಸಾರಿನ 'ಘಂ' ಎಂಬ ಘಮಲು ಬಾಯಲ್ಲಿ ನೀರೂರಿಸುತ್ತದೆ ಎಂಬುದು ಎಲ್ಲರಿಗು ಗೊತ್ತಿರುವ ಸತ್ಯ! ಒಗ್ಗರಣೆ ಬ್ರಹ್ಮಚಾರಿಗಳಿಗೆ, ವಿದೇಶದಲ್ಲಿ ಒಬ್ಬರೇ ಇರುವವರಿಗೆ ಒಗ್ಗರಣೆ ಚಿತ್ರಾನ್ನ, ಒಗ್ಗರಣೆ ಹಾಕಿದ ಮೊಸರನ್ನ ದೇವರುಕೊಟ್ಟ ವರ. ಒಗ್ಗರಣೆಯ ಘಮ ಘಮಿಸುವ ಪರಿಮಳಕ್ಕೆ ಒಂದು ವಿಶೇಷ ಸ್ಥಾನವಿದೆ. ಮನೆಯಲ್ಲಿದ್ದವರು ಅಥವಾ ನೆಂಟರು ಹೇಳುವ ಜನಪ್ರಿಯ ಮಾತು, ' ಏನು ವಿಶೇಷ! ಜೋರಾಗಿ ಒಗ್ಗರಣೆ ಘಮ ಬರುತ್ತಿದೆ. ಏನು ಸ್ಪೆಷಲ್?'

ಫಿನಿಶಿಂಗ್ ಟಚ್

ಒಗ್ಗರಣೆ ಅಂದರೆ ಅಡುಗೆ ಮುಗಿದು ಊಟದ ಸಮಯ ಆಯಿತೆಂದು ಸೂಚಿಸುವ ಸಿಗ್ನಲ್, ಬೆಲ್, ಅಲಾರಾಂ ಮತ್ತು ನೋಟೀಸ್. ಇದಕ್ಕೆ ಎಂತಹ ಮಾಂತ್ರಿಕ ಶಕ್ತಿ ಇದೆ ಒಗ್ಗರಣೆ ಶಬ್ದದ ಜತೆ ಅದರ ಘಮಲು ಮೂಗಿಗೆ ತಗುಲಿದ ತಕ್ಷಣ ಏಕಾಗ್ರತೆ ಭಂಗವಾಗಿ, ಅಡುಗೆ ಮನೆ ಕಡೆ ಹೊರಡುವ ಮನಸ್ಸಾಗುತ್ತದೆ. ಅವಲಕ್ಕಿ ಮಂಡಕ್ಕಿ, ಮೊಸರವಲಕ್ಕಿ ಇವುಗಳಿಗೆ ಒಗ್ಗರಣೆ ಬಿತ್ತು ಅಂದರೆ ಅಮೋಘ ರುಚಿ.

ಒಟ್ಟಿನಲ್ಲಿ ಎಷ್ಟೇ ಚೆಂದವಾಗಿ ಅಡುಗೆ ಮಾಡಿದರೂ, ಕೊನೆಯ ಬಾಲ್‌ನಲ್ಲಿ ಸಿಕ್ಸ್ ಹೊಡೆದಂತೆ, ಫಿನಿಶಿಂಗ್ ಟಚ್ ಕೊಡುವ ಫಿನಿಶರ್ ಒಗ್ಗರಣೆ. ಅಡುಗೆಯ ರುಚಿಯನ್ನು ಹೆಚ್ಚಿಸುವುದರ ಜತೆಗೆ, ಅದರ ಪರಿಮಳ ನಾಸಿಕವನ್ನು ಅರಳಿಸಿ, ಮನಸ್ಸನ್ನು ಆರ್ಕಸಿ ನಾಲಿಗೆಗೆ ಸ್ವರ್ಗತೋರಿಸುವ ಈ ಒಗ್ಗರಣೆಗೆ ಒಗ್ಗರಣೆಯೇ ಸಾಟಿ .

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೊದಲ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com